ಶ್ರೀ ಸಿ.ಎಂ. ಇಬ್ರಾಹಿಂ.—ತಮ್ಮ ಮುಖಾಂತರ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ. ಆಲ್ಲಿ ಒಂದು ದೇವಸಾ ನ ಇದೆ. ಮಸೀದಿ ಇದೆ. ಇದರಿಂದ ಆಲ್ಲಿ 'ಒಡಾಡತಕ್ಕಂಥ ಜನರಿಗೆ ಬಹಳ ತೊಂದರೆ ಯಾಗುತ್ತಿದೆ. ನಿಮ್ಮ ೨೦ ಅಂಶದ ಕಾರ್ಯಕ್ರಮದ ಪ್ರಕಾರ ಪಾನ ನಿರೋಧವನ್ನು ಹಂತ ಹಂತವಾಗಿ ಜಾರಿಗೆ ತರುತ್ತೇವೆಂದು ಹೇಳಿದ್ದೀರಲ್ಲಾ ಆದರಂತೆ ನಾನು ೮ ಸಾವಿರ ಜನರ ಸಹಿ ಪಾಕಿಸಿಕೊಡುತ್ತೇನೆ. ನೀವು ಆ ಶಾಪನ್ನು ತೆಗೆಯುತ್ತೀರಾ ?

ಶ್ರೀ ಆರ್.ಎಸ್. – ನಾನು ಮತ್ತೆ ಮಾನ್ಯ ಸದಸ್ಯರು ಹೇಳಿರುವುದನ್ನೇ ರಿಪೀಟ್ ಮಾಡುತ್ತಿದ್ದೇನೆ. ೮ ಸಾವಿರ ಜನರ ರುಜು ಪಾಕಿಸಿ ಕೊಟ್ಟರೆ ಅಷ್ಟೇ ಗೌರವದಿಂದ ಅವಶ್ಯಕವಾಗಿ ಪರಿಶೀಲಿಸುತ್ತೇನೆ.

Admission of boys to Kasturba Girls High School in Karle Village at Hassan Taluk.

199 SRI K. H. HANUME GOWDA (Hassan).—Will the Minister for Education be pleased to state :—

(*a*) since how long girls' high school is being run by the Kasturba Girls' Institution in Karle village in Kattaya hobli of Hassan Taluk; the number of girls studying in that high school ;

(*b*) whether it has come to the notice of the Government that sons of farmers of many villages of surrounding areas walk about a distance of 5 to 6 miles every day for their studies in the High School;

(*c*) whether it is not a fact that after realising the difficulties the Kasturba Girls' Instutition has sought permission from the Government for admitting boys to this school ;

(*d*) whether it is not a fact that the Government has been informed that no extra expenditure would be incurred even after admitting the boys to their Institution ;

(*e*) whether it has also come to the notice of the Government that there would not be any dearth of building and teachers even if the boys are admitted to this institution ?

SRI B. SUBBAYYA SETTY (Minister for Education).—

(*a*) Since six years. The present strength of Girls-118.

(*b*) Yes.

(*c*) The Kasturba girls institution had requested the Government for permission to admit boys to their school. But the representation has been rejected on the ground that the said high school was started by the Institution only for the education of Girls and if permission is given for admitting boys in that school then the purpose of starting the school for the benefit of girls would not be achieved.

(*d*) If the boys are admitted to this school, then the number of classes will have to be increased thereby causing additional expenditure to the Government.

(*e*) If the boys are admitted to this school, the strength of students and classes will be increased which in turn causes shortage of accommodation and teachers.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಹಾಸನ ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ಳ ಪ್ರೌಢಶಾಲೆಗಳು ಇವೆ. ಶಾಂತಿ ಗ್ರಾಮ, ಮೊಸಳೆ, ಹೊಳಹಳ್ಳಿ, ಕಟ್ಟಾಯ, ಗೋರೂರು ಈ ಊರು ಗಳಿಂದ ಬಂದು ಈ ಳ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳು ಚೆನ್ನಾಗಿ ಓದುತ್ತಿದ್ದಾರೆ, ಫಲಿತಾಂಶ ಸಹ ಚೆನ್ನಾಗಿ ಬರುತ್ತಿದೆ. ಪರಿಸ್ಥಿತಿ ಹೀಗಿದ್ದರೂ ಕೂಡ ಕಾರ್ಲೆ ಗ್ರಾಮದಲ್ಲಿರುವ ಕಸ್ತೂರಿಬಾ ಹೆಣ್ಣುಮಕ್ಕಳ ವಿದ್ಯಾಲಯಕ್ಕೆ ಗಂಡುಮಕ್ಕಳನ್ನು ಸೇರಿಸಿಕೊಂಡರೆ ತೊಂದರೆಯಾಗುತ್ತದೆ ಎಂದು ತಾವು ಹೇಳಿದ್ದೀರಿ. ಇದು ಯಾವರೀತಿಯಲ್ಲಿ ತೊಂದರೆಯಾಗುತ್ತದೆ ಸ್ವಾಮಿ ?

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಹಳ್ಳಿಗಾಡಿನ ಹೆಣ್ಣುಮಕ್ಕಳಿಗೆ ಹೆಚ್ಚಿನ ಸವಲತ್ತು ಸಿಕ್ಕಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಹೆಣ್ಣುಮಕ್ಕಳ ಶಾಲೆ ಇದೆ. ಗಂಡುಮಕ್ಕಳ ಖಾಸಗಿ ಶಾಲೆಗಳಿಗೆ ೫ ವರ್ಷದ ವರೆಗೆ ಸಂಬಳದ ಸೌಕರ್ಯವನ್ನು ಕೊಡದಿದ್ದರೂ ಕೂಡ ಅವರು ನಡೆಸಿಕೊಂಡು ಹೋಗುತ್ತಾರೆ. ಆದರೆ ಹೆಣ್ಣುಮಕ್ಕಳ ಶಾಲೆಗಳಿಗೆ ನಾವು ೫ ವರ್ಷದ ಮೇಲೆ ಸಂಬಳದ ಸೌಕರ್ಯವನ್ನು ಕೊಡುತ್ತಿದ್ದೇವೆ. ಅದರಂತೆ ಈ ಶಾಲೆಯನ್ನು ನಾವು ತೆಗೆದುಕೊಂಡು ೫ ವರ್ಷವಾಯಿತು. ಇದಕ್ಕೆ ನಾವು ಸಂಬಳದ ಸೌಕರ್ಯವನ್ನು ಕೊಡುತ್ತಿದ್ದೇವೆ. ಈ ಹೆಣ್ಣುಮಕ್ಕಳ ಶಾಲೆಗೆ ಗಂಡು ಮಕ್ಕಳನ್ನು ಸೇರಿಸುವ ಬಗ್ಗೆ ನಾವು ಏತಕ್ಕೆ ಬೇಡ ಎಂದು ಹೇಳಿದ್ದೇವೆ ಎಂದರೆ ಈ ಶಾಲೆಯನ್ನು ಪ್ರಾರಂಭ ಮಾಡುವಾಗ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರವೆಂದು ಈ ಪ್ರೌಢಶಾಲೆಯನ್ನು ಪ್ರಾರಂಭ ಮಾಡಿರುವುದರಿಂದ ಈ ಒಂದು ಮೂಲ ಉದ್ದೇಶಕ್ಕೆ ಧಕ್ಕೆಬರುತ್ತದೆ ಎಂದು ಹೇಳಿ ಅಲ್ಲಿ ಗಂಡುಮಕ್ಕಳನ್ನು ಸೇರಿಸಿಕೊಳ್ಳುವುದಕ್ಕೆ ಅನುಮತಿ ಕೊಟ್ಟಿಲ್ಲ.

ಶ್ರೀ ಕೆ.ಎಚ್. ಹನುಮೇಗೌಡ.—ತಾವು ಮೂಲ ಉದ್ದೇಶಕ್ಕೆ ಧಕ್ಕೆ ಬರುತ್ತದೆ ಎಂದು ಹೇಳಿದ್ದೀರಿ ಅದು ನನಗೆ ಅರ್ಥವಾಗುವುದಿಲ್ಲ. ಏಕೆಂದರೆ ಅದೇ ಕ್ಷೇತ್ರದಲ್ಲಿ ಳ ಪ್ರೌಢಶಾಲೆಗಳಲ್ಲಿ ಹೆಣ್ಣುಮಕ್ಕಳ ಜೊತೆಯಲ್ಲಿ ಗಂಡುಮಕ್ಕಳು ಚೆನ್ನಾಗಿ ಓದುತ್ತಿದ್ದಾರೆ; ರಿಸಲ್ಟ್ ಸಹ ಚೆನ್ನಾಗಿ ಬಂದಿದೆ. ಈ ರೀತಿ ಇರುವಾಗ ಈ ಶಾಲೆಗೆ ಮಾತ್ರ ಗಂಡುಮಕ್ಕಳನ್ನು ಸೇರಿಸಿಕೊಳ್ಳುವುದು ಏತಕ್ಕೆ ಬೇಡ ಎಂದು ಹೇಳುತ್ತಿದ್ದೀರಿ ? ತಾವು ಹೆಣ್ಣುಮಕ್ಕಳ ಶಾಲೆಗೆ ಗ್ರಾಂಟ್ ಕೊಡುತ್ತಿದ್ದೀರಿ, ಅದು ನಿಜ; ಹಾಗೆಯೇ ಅವರು ವಿದ್ಯಾವಂತರಾಗಿದ್ದಾರೆ, ಅದೂ ನಿಜ. ಆದರೆ ಅಲ್ಲಿ ಪರಿಸ್ಥಿತಿ ಏನಿದೆ ಎಂದರೆ ಅದೇ ಪ್ರದೇಶದಲ್ಲಿ ನೂರಾರು ಜನ ರೈತರ ಮಕ್ಕಳು ಶಾಲೆಗೆ ೬–೭ ಮೈಲಿ ದೂರ ನಡೆದುಕೊಂಡು ಹೋಗಬೇಕು. ತಂದೆತಾಯಿಗಳಿಗೆ ಶಾಲೆಗೆ ಹೋಗುತ್ತೇವೆಂದು ಹೇಳಿ ಅವರು ಇನ್ನೆಲ್ಲಿಗಾದರೂ ಹೋಗಿಬರುತ್ತಾರೆ.

ಇದರಿಂದ ಅವರ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ. ಟೌನ್‌ನಲ್ಲಿ ಆದರೆ ತಂದೆತಾಯಿಗಳು ಮನೆಯಲ್ಲೂ ಸಹ ಮಕ್ಕಳಿಗೆ ಪಾಠ ಹೇಳಿಕೊಡುತ್ತಾರೆ. ಅಲ್ಲದೆ ಮಕ್ಕಳು ಮನೆಯ ಪಕ್ಕದಲ್ಲಿರತಕ್ಕಂಥ ಪಾಠಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಾರೆ. ಅವರಿಗೇನೂ ತೊಂದರೆಯಿಲ್ಲ. ತಾವು ಈ ಬಡ ರೈತ ಮಕ್ಕಳ ತೊಂದರೆಯನ್ನೂ ತಾವು ಗಮನಿಸಬೇಕು. ತಾವು ವಿದ್ಯಾಭ್ಯಾಸಕ್ಕಾಗಿ ೧೪೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಇದು ಸಾರ್ಥಕವಾಗಬೇಕು. ಈಗ ಕಸ್ತೂರಿಬಾ ವಿದ್ಯಾಲಯದವರು ಗಂಡುಮಕ್ಕಳನ್ನು ಸೇರಿಸಿಕೊಳ್ಳುವುದಕ್ಕೆ ಬೇಡ ಎಂದು ಹೇಳಿಲ್ಲ. ಅಲ್ಲಿಯ ಹೆಣ್ಣು ಮಕ್ಕಳೂ ಕೂಡ ಗಂಡುಮಕ್ಕಳ ಜೊತೆ ನಾವು ಓದುವುದಿಲ್ಲ ಎಂದು ಅರ್ಜಿ ಕೊಟ್ಟಿಲ್ಲ. ಹೀಗಿರುವಾಗ ತಾವು ಗಂಡುಮಕ್ಕಳಿಗೆ ಅಲ್ಲಿ ಅವಕಾಶ ಕೊಡದಿದ್ದರೆ ಹೇಗೆ ? ಗ್ರಾಮಾಂತರ ಪ್ರದೇಶದ ತೀರ ಹಿಂದುಳಿದಿರತಕ್ಕ ರೈತರ ಮಕ್ಕಳ ಹಿತದೃಷ್ಟಿಯಿಂದ ಅವರು ಅಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ತಾವು ಪರ್ಮಿಷನ್ ಕೊಡಬೇಕು. ಮಾನ್ಯ ಮಂತ್ರಿಯವರು ದಯಮಾಡಿ ಇದಕ್ಕೆ ಒಪ್ಪಿಕೊಳ್ಳಬೇಕು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆ ಊರಿನವರು ಅಲ್ಲಿ ಹೆಣ್ಣುಮಕ್ಕಳ ಶಾಲೆ ಅಗತ್ಯವಿದೆ ಎಂದು ಹೇಳಿದಾಗ ಆ ಊರಿನವರ ಅವಶ್ಯಕತೆ ಏನಿದೆ ಅದಕ್ಕನುಗುಣವಾಗಿ ಅಲ್ಲಿ ಹೆಣ್ಣುಮಕ್ಕಳ ಶಾಲೆಯನ್ನು ಕೊಟ್ಟಿದೆ. ಈಗ ತಾವು ಏನೊಂದು ಸಮಸ್ಯೆಯನ್ನು ಹೇಳುತ್ತಿದ್ದೀರಿ ಅದು ಇವತ್ತಿನ ಸಮಸ್ಯೆಯಲ್ಲ, ಬಹಳ ಹಿಂದಿನಿಂದಲೂ ಇದೆ. ಈ ಸಮಸ್ಯೆ ಇಂದು ಉದ್ಭವವಾಗಿದೆ ಎಂದು ನಾನಾದರೂ ಒಪ್ಪಿಕೊಳ್ಳುವುದಿಲ್ಲ. ಆದರೂ ತಾವು ಏನು ಹೇಳಿದ್ದೀರಿ ಅದನ್ನು ನಾನು ಪುನಃ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ,—ಅಲ್ಲಿ ಗಂಡುಮಕ್ಕಳನ್ನು ಸೇರಿಸಿಕೊಂಡರೆ ಸೆಕ್ಷನ್ಸ್ ಜಾಸ್ತಿ ಯಾಗಿರುವುದರಿಂದ ಸರ್ಕಾರಕ್ಕೆ ಹೆಚ್ಚಿನ ಖರ್ಚು ಬೀಳುತ್ತದೆ ಎಂದು ತಾವು ಹೇಳಿದ್ದೀರಿ, ಈಗ ಅಲ್ಲಿ ೧೨ ರೂಮುಗಳು ಇವೆ. ಆದರಲ್ಲಿ ೪-೫ ರೂಮುಗಳು ಉಪಯೋಗಿಸುತ್ತಿದ್ದಾರೆ. ತಾವು ಗಂಡುಮಕ್ಕಳಿಗೂ ಪರ್ಮಿಷನ್ ಕೊಟ್ಟರೂ ಅಲ್ಲಿ ಸ್ಥಳ ಇದೆ, ಅವರೂ ಇಲ್ಲಿಗೆ ಬಂದು ವಿದ್ಯಾಭ್ಯಾಸ ಮಾಡುವುದರಿಂದ ಯಾವ ವಿಧದಲ್ಲೂ ತೊಂದರೆಯಾಗುವುದಿಲ್ಲ. ಅದೂ ಅಲ್ಲದೇ ಸ್ಥಿತಿವಂತರ ಮಕ್ಕಳು ಪಕ್ಕದ ಶಾಲೆಗಳಿಗೆ ಹೋಗು ವುದರಿಂದ ಒಂದೆರಡು ಸೆಕ್ಷನ್ ಆಟೋಮ್ಯಾಟಿಕ್ ಆಗಿ ರೆಡ್ಯೂಸ್ ಆಗುತ್ತದೆ. ಆದ್ದರಿಂದ ತೊಂದರೆ ಯೇನೂ ಇರುವುದಿಲ್ಲ. ತಾವು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ; ಆದಷ್ಟು ಬೇಗ ತಾವು ಆದಕ್ಕೆ ಒಪ್ಪಿಗೆ ಕೊಡಿ ಸ್ವಾಮಿ ?

(ಉತ್ತರ ಇಲ್ಲ)

Drinking water supply scheme in Gulbarga City.

250 SRI QAMURAL ISLAM (Gulbarga).—Will the Minister for Municipal Administration be pleased to state :—

(*a*) whether the scheme for supply of drinking water to Gulbarga City from Kotnur Boring well to SB College Reservoir tank has been accepted and sanctioned.

(*b*) If not, why ?

(*c*) whether there are any immediate measures before Government to meet the urgent demand of drinking water in Gulbarga City ?

SRI H. C. SRIKANTAIAH (Minister for Municipal Administration)—

(*a*) Yes.

(*b*) Does not arise.

(*c*) Gulbarga City faced acute scarcity of drinking water in April and May this year, because Bhosga tank dried up. Immediately water was supplied by lorries fitted with tanks to augment the existing water supply. Additional borewells were also sunk and few borewells and open well which had not been harnessed earlier, were exploited.

Now, there has been good rainfall in the catchment area. The Bhosga tank has received 6' water and water supply through lorries has been discontinued.

SRI GOVIND P. VADEYARAJ.—Though the Kotnur Boring Well is over, still this scarcity of drinking water to Gulbarga City exists. May I know what is the position of Bennithora work as on to-day ?

† SRI H. C. SRIKANTAIAH.—I have already promised the hon'ble Members that the work will be completed by the end of August, 1978.

SRI GOVIND P. VADEYARAJ.—Has it come to the notice of the Government that the work is slowed down considerably ? They are supplying rain water to the Gulbarga City. Therefore, taking